# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 787 |
| ಸದಸ್ಯರ ಹೆಸರು | ಶ್ರೀ ಎಂ.ಎ.ಗೋಪಾಲಸ್ವಾಮಿ<br>(ಸ್ಥಳಿಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 09.03.2021 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಖನಿಜ ಪರವಾನಗಿ ಇಲ್ಲದೆ ನಡೆಸುತ್ತಿರುವ ಅಕ್ರಮ ಕಲ್ಲುಗಣಿಗಾರಿಕೆ ನಿಯಂತ್ರಣಕ್ಕೆ ಸರ್ಕಾರ ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ: (ವಿವರ ನೀಡುವುದು) | ಅನಧಿಕೃತ ಗಣಿಗಾರಿಕೆ, ಸಾಗಾಣಿಕೆ ಮತ್ತು ದಾಸ್ತಾನನ್ನು ತಡೆಗಟ್ಟಲು ಸರ್ಕಾರದಿಂದ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.<br>• ಸರ್ಕಾರದ ಅಧಿಸೂಚನೆ ಸಂಖ್ಯೆ ಸಿಐ 21 ಎಂಎಂಎನ್ (2) 2014, ದಿನಾಂಕ 21.01.2014 ರಂತೆ ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ, 1957ರ ಕಲಂ 21 ಮತ್ತು 22 ರಡಿ ಮತ್ತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 43 ಮತ್ತು 46 ರಂತೆ ಅನಧಿಕೃತ ಗಣಿಗಾರಿಕೆ, ಸಾಗಾಣಿಕೆ ಮತ್ತು ದಾಸ್ತಾನು ವಿರುದ್ಧ ಕ್ರಮವಹಿಸಲು, ಕಂದಾಯ, ಅರಣ್ಯ ಪೊಲೀಸ್ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆ ಅಧಿಕಾರಿಗಳಿಗೆ ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿದೆ.<br>• ಅನಧಿಕೃತ ಕಲ್ಲು ಗಣಿಗಾರಿಕೆ / ಸಾಗಾಣಿಕೆಯನ್ನು ನಿಯಂತ್ರಿಸಲು ಜಿಲ್ಲಾ ಟಾಸ್ಕ್ ಪೋರ್ಸ್ (ಗಣಿ) ಸಮಿತಿಯಿಂದ ರಾಜ್ಯದಲ್ಲಿ ಆಯಾಕಟ್ಟಿನ ಪ್ರದೇಶಗಳಲ್ಲಿ ತನಿಖಾ ಠಾಣೆಗಳನ್ನು ತೆರೆದು ಕಾರ್ಯ ನಿರ್ವಹಿಸಲಾಗುತ್ತಿದೆ. ಅಲ್ಲದೆ ಆಯಾ ಜಿಲ್ಲಾ ವ್ಯಾಪ್ತಿಗಳಲ್ಲಿ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಚಾಲಿತ ದಳವನ್ನು ರಚಿಸಿಕೊಂಡು ಅನಧಿಕೃತ ಕಲ್ಲು ಗಣಿಗಾರಿಕೆ/ ಸಾಗಾಣಿಕೆಯನ್ನು ನಿಯಂತ್ರಿಸಲಾಗುತ್ತಿದೆ.<br>• ಕಲ್ಲುಗಣಿಗಾರಿಕೆಗೆ ಗುತ್ತಿಗೆ / ಲೈಸನ್ಸ್ ಮಂಜೂರು ಮಾಡುವ ಪೂರ್ವದಲ್ಲಿ ಕೇಂದ್ರ ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯದ ಆದೇಶದಂತೆ ಸಂಬಂಧಪಟ್ಟ ಅರ್ಜಿದಾರರಿಂದ ಕಡ್ಡಾಯವಾಗಿ ಕ್ವಾರಿ ಯೋಜನೆ ಮತ್ತು ಪರಿಸರ ಅನುಮತಿ ಪತ್ರ ಪಡೆದು ಗುತ್ತಿಗೆ / ಲೈಸನ್ಸ್ ಗಳನ್ನು ಮಂಜೂರು ಮಾಡಲಾಗುತ್ತದೆ. |

- ರಾಜ್ಯ ವ್ಯಾಪ್ತಿಯಲ್ಲಿನ DGMS ನಿಂದ ಅನುಮತಿ ಪಡೆದು ಕಲ್ಲುಗಣಿ ಗುತ್ತಿಗೆ ಕಾರ್ಯ ನಿರ್ವಹಿಸುವುದನ್ನು ಕಡ್ಡಾಯಗೊಳಿಸಲಾಗಿರುತ್ತದೆ.

**ಕಲ್ಲುಗಣಿಗಾರಿಕೆ :-** (ರೂ.ಲಕ್ಷಗಳಲ್ಲಿ)

| ಕ್ರ ಸಂ | ವರ್ಷ | ಪತ್ತೆ ಹಚ್ಚಿದ ಪ್ರಕರಣಗಳು | ದಾಖಲಿಸಿರುವ ಮೊಕದ್ದಮೆಗಳ ಸಂಖ್ಯೆ | ವಸೂಲಾದ ದಂಡ) |
|---|---|---|---|---|
| 1. | 2018–19 | 413 | 108 | 1213.37 |
| 2. | 2019–20 | 266 | 117 | 908.70 |
| 3. | 2020–21 | 580 | 99 | 781.06 |
| | ಒಟ್ಟು | **1259** | **324** | **2903.13** |

**ಕಲ್ಲು ಸಾಗಾಣಿಕೆ :-** (ರೂ.ಲಕ್ಷಗಳಲ್ಲಿ)

| ಕ್ರ ಸಂ | ವರ್ಷ | ಪತ್ತೆ ಹಚ್ಚಿದ ಪ್ರಕರಣಗಳು | ದಾಖಲಿಸಿರುವ ಮೊಕದ್ದಮೆಗಳ ಸಂಖ್ಯೆ | ವಸೂಲಾದ ದಂಡ |
|---|---|---|---|---|
| 1. | 2018–19 | 716 | 214 | 3684.97 |
| 2. | 2019–20 | 558 | 109 | 88.27 |
| 3. | 2020–21 | 2432 | 337 | 963.63 |
| | ಒಟ್ಟು | **3706** | **660** | **4736.87** |

**ಆ)** ಅಕ್ರಮ ಕಲ್ಲು ಗಣಿಗಾರಿಕೆ ನಿಯಂತ್ರಣಕ್ಕೆ ಡ್ರೋನ್ ಸಮೀಕ್ಷೆ ಕೈಗೊಳ್ಳಲು 2020–21ನೇ ಸಾಲಿನಲ್ಲಿ ಮಂಜೂರಾದ ಅನುದಾನವೆಷ್ಟು; ಈ ಸಮೀಕ್ಷೆಯನ್ನು ಯಾವ ಯಾವ ಜಿಲ್ಲೆಗಳಲ್ಲಿ ನಡೆಸಲಾಗಿದೆ; ಈ ಸಮೀಕ್ಷೆಯಿಂದ ಎಷ್ಟು ಅಕ್ರಮ ಕಲ್ಲು ಗಣಿಗಾರಿಕೆಯನ್ನು ಗುರುತಿಸಲಾಗಿದೆ; (ಅವುಗಳ ವಿವರಗಳನ್ನು ಜಿಲ್ಲಾವಾರು ನೀಡುವುದು)

ಸರ್ಕಾರದ ಆದೇಶ ಸಂಖ್ಯೆ ಸಿಐ 70 ಎಂಜಿಎಸ್ 2020, ದಿನಾಂಕ 10.09.2020 ರಂತೆ ಚಾಲ್ತಿಯಲ್ಲಿರುವ ಕಲ್ಲುಗಣಿ ಗುತ್ತಿಗೆ ಪ್ರದೇಶಗಳಲ್ಲಿ ಗುತ್ತಿಗೆದಾರರು ಸಂಚಿತ ಆಡಿಟ್ ಪ್ರಮಾಣಕ್ಕಿಂತ ಅಧಿಕವಾಗಿ ತೆಗೆದಿರುವ ಉಪಖನಿಜದ ಪ್ರಮಾಣವನ್ನು ಡ್ರೋಣ್ / ಡಿಜಿಪಿಎಸ್ ಸಮೀಕ್ಷೆಯಿಂದ ಅಂದಾಜಿಸಿ, ಕ್ವಾರಿ ಪಿಟ್ ನ Reduced Level ಗಳನ್ನು ನಿಗದಿಪಡಿಸುವ ಸಂಬಂಧ 2020–21ನೇ ಸಾಲಿನಲ್ಲಿ ಡ್ರೋಣ್ / ಡಿಜಿಪಿಎಸ್ ಸರ್ವೆ ಕಾರ್ಯ ಕೈಗೊಳ್ಳಲು ರೂ. 8.00 ಕೋಟಿ ಅನುದಾನ ಹಂಚಿಕೆ ಮಾಡಲಾಗಿರುತ್ತದೆ.

ಅದರಂತೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಡ್ರೋಣ್ / ಡಿಜಿಪಿಎಸ್ ಸರ್ವೆ ಕಾರ್ಯ ನಡೆಸುವ ಸೇವಾದಾರರನ್ನು ಇ-ಟೆಂಡರ್ ಮೂಲಕ ಆಯ್ಕೆ ಮಾಡಲು ಇ–ಟೆಂಡರ್ ಪ್ರಕ್ರಿಯೆ ಕೈಗೊಳ್ಳಲಾಗುತ್ತಿದೆ. ಡ್ರೋಣ್ ಸರ್ವೆ ಕಾರ್ಯ ಕೈಗೊಂಡು ವರದಿಯನ್ನು ಪಡೆದು ಪರಿಶೀಲಿಸಿ, ಪರವಾನಗಿ ಪ್ರಮಾಣಕ್ಕಿಂತ ಹೆಚ್ಚುವರಿಯಾಗಿ ಕಟ್ಟಡ ಕಲ್ಲು ಸಾಗಾಣಿಕೆ ಮಾಡಿರುವ ಬಗ್ಗೆ ದೃಢಪಟ್ಟಲ್ಲಿ ನಿಯಮಾನುಸಾರ ಕ್ರಮವಹಿಸಲಾಗುವುದು.

--3

| | | |
|---|---|---|
| ಇ) | ಗಣಿಗಾರಿಕೆಯಿಂದ ತೊಂದರೆಗೊಳಗಾದ ಪ್ರದೇಶಗಳ ಅಭಿವೃದ್ಧಿ ಮತ್ತು ಜನರ ಜೀವನಮಟ್ಟ ಸುಧಾರಣೆಗೆ ಗುತ್ತಿಗೆದಾರರಿಂದ ಜಿಲ್ಲಾ ನಿಧಿಗೆ ರಾಜಧನ ಸಂಗ್ರಹ ಮಾಡಲಾಗುತ್ತಿದೆಯೇ?<br>(ಮಾಡಿದ್ದಲ್ಲಿ, ಕಳೆದ 3 ವರ್ಷಗಳಲ್ಲಿ ಸಂಗ್ರಹವಾದ ಮತ್ತು ಬಳಕೆ ಮಾಡಿರುವ ವಂತಿಗೆಯ ವಿವರವನ್ನು ಜಿಲ್ಲಾವಾರು ನೀಡುವುದು) | ಗಣಿಗಾರಿಕೆಯಿಂದ ತೊಂದರೆಗೊಳಗಾದ ಪ್ರದೇಶಗಳ ಅಭಿವೃದ್ಧಿ ಮತ್ತು ಜನರ ಜೀವನ ಮಟ್ಟ ಸುಧಾರಣೆಗೆ ಗಣಿ ಮತ್ತು ಕಲ್ಲುಗಣಿ ಗುತ್ತಿಗೆದಾರರಿಂದ ಜಿಲ್ಲಾ ಖನಿಜ ಪ್ರತಿಷ್ಠಾನ (ಡಿ.ಎಂ.ಎಫ್) ವಂತಿಗೆಯನ್ನು ಸಂಗ್ರಹಿಸಲಾಗುತ್ತಿದೆ. ಡಿಎಂಎಫ್ ವಂತಿಗೆಯನ್ನು 2015-16ನೇ ಸಾಲಿನಿಂದ ಸಂಗ್ರಹಿಸಲಾಗುತ್ತಿದ್ದು, 2020-21 ಜನವರಿ 21ರ ಅಂತ್ಯದವರಗೆ ರೂ.2336.13 ಕೋಟಿಗಳನ್ನು ಸಂಗ್ರಹಿಸಿ, ರೂ.3635.78 ಕೋಟಿಗಳ ಕ್ರಿಯಾ ಯೋಜನೆಯನ್ನು ತಯಾರಿಸಿ ರೂ.798.16 ಕೋಟಿ ಪ್ರಧಾನ ಮಂತ್ರಿ ಖನಿಜ ಕ್ಷೇತ್ರ ಕಲ್ಯಾಣ ಯೋಜನೆ (ಪಿ.ಎಂ.ಕೆ.ಕೆ.ಕೆ.ವೈ) ಯೋಜನೆಗಳಿಗೆ ಖರ್ಚು ಮಾಡಲಾಗಿದೆ.<br>ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |

ಸಂಖ್ಯೆ ಸಿಐ 116 ಎಂಎಂಎನ್ 2021

(ಮುರುಗೇಶ್ ಆರ್. ನಿರಾಣಿ)
ಗಣಿ ಮತ್ತು ಭೂವಿಜ್ಞಾನ ಸಚಿವರು.

ಅನುಬಂಧ

ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ಅಡಿ ಸಂಗ್ರಹಿಸಿದ ಹಾಗೂ ಖರ್ಚಾದ ಮೊತ್ತದ ವಿವರ

Rs.in Lakhs

| Sl.No. | District | DMF Collection from 2015-16 to Jan 2021 | Total No. of Projects | Action plan Amount | Amount Spent | No. of on going projects | No. of projects completed | No. of project yet to start | No. of projects scrapped/cancelled | Expenditure % |
|---|---|---|---|---|---|---|---|---|---|---|
| 1 | Ballari | 136487.70 | 2268 | 222215.51 | 40442.80 | 252 | 354 | 1468 | 194 | 30% |
| 2 | Kalaburagi | 33104.40 | 1343 | 54084.42 | 6054.37 | 243 | 531 | 522 | 47 | 18% |
| 3 | Chitradurga | 20211.63 | 294 | 30639.65 | 5210.15 | 30 | 11 | 244 | 9 | 26% |
| 4 | Bagalkot | 6969.68 | 259 | 11410.19 | 2650.95 | 89 | 50 | 118 | 2 | 38% |
| 5 | Koppal | 4850.41 | 444 | 8512.12 | 3240.92 | 152 | 104 | 188 | 0 | 67% |
| 6 | Raichur | 3962.56 | 81 | 7023.41 | 1960.01 | 52 | 11 | 2 | 16 | 49% |
| 7 | Chikkaballapur | 3402.98 | 107 | 6672.24 | 873.73 | 40 | 20 | 47 | 0 | 26% |
| 8 | Ramanagara | 3273.30 | 407 | 2750.56 | 1472.29 | 168 | 119 | 93 | 27 | 45% |
| 9 | Bangalore Urban | 3119.07 | 553 | 6354.13 | 839.61 | 186 | 5 | 362 | 0 | 27% |
| 10 | Tumakuru | 2782.63 | 224 | 4995.63 | 821.02 | 5 | 1 | 58 | 160 | 30% |
| 11 | Bangalore Rural | 2247.59 | 61 | 144.50 | 17.70 | 25 | 8 | 28 | 0 | 1% |
| 12 | Belgaum | 2180.08 | 93 | 1524.30 | 1366.96 | 61 | 9 | 23 | 0 | 63% |
| 13 | Chamarajanagar | 2105.17 | 51 | 1954.18 | 284.49 | 8 | 7 | 33 | 3 | 14% |
| 14 | Uttara Kannda | 1142.00 | 97 | 761.63 | 663.49 | 11 | 79 | 2 | 5 | 58% |
| 15 | Hassan | 1092.23 | 239 | 653.63 | 519.48 | 48 | 180 | 11 | 0 | 48% |
| 16 | Dakshina Kannada | 857.63 | 52 | 165.50 | 126.49 | 13 | 36 | 3 | 0 | 15% |
| 17 | Udupi | 731.62 | 129 | 446.07 | 97.27 | 10 | 49 | 70 | 0 | 13% |
| 18 | Chikkamagaluru | 721.76 | 118 | 665.24 | 486.88 | 73 | 19 | 26 | 0 | 67% |
| 19 | Kolar | 697.63 | 97 | 161.81 | 66.19 | 53 | 44 | 0 | 0 | 9% |
| 20 | Gadag | 606.09 | 56 | 114.13 | 68.13 | 6 | 26 | 24 | 0 | 11% |
| 21 | Dharwad | 553.88 | 41 | 265.40 | 46.41 | 16 | 0 | 25 | 0 | 8% |
| 22 | Haveri | 538.52 | 122 | 788.01 | 127.54 | 5 | 10 | 105 | 2 | 24% |
| 23 | Vijayapura | 458.05 | 31 | 410.22 | 108.37 | 7 | 0 | 24 | 0 | 24% |
| 24 | Davanagere | 434.44 | 14 | 532.43 | 398.94 | 6 | 8 | 0 | 0 | 92% |
| 25 | Mandya | 392.72 | 0 | 0 | 0 | 0 | 0 | 0 | 0 | 0% |
| 26 | Shivamogga | 209.50 | 19 | 56.94 | 27.36 | 8 | 4 | 7 | 0 | 13% |
| 27 | Mysuru | 157.56 | 8 | 177.19 | 9.44 | 3 | 0 | 5 | 0 | 6% |
| 28 | Bidar | 115.16 | 9 | 47.77 | 0.00 | 0 | 0 | 9 | 0 | 0% |
| 29 | Kodagu | 106.16 | 2 | 14.50 | 0.00 | 1 | 0 | 1 | 0 | 0% |
| 30 | Yadgir | 100.99 | 11 | 36.97 | 14.58 | 0 | 5 | 6 | 0 | 14% |
| | COVID 19 Expenditure up to 31st Jan 2021 | | | | 11820.81 | | | | | |
| | Grand Total | 233613.15 | 7230 | 363578.27 | 79816.36 | 1571 | 1690 | 3504 | 465 | 34% |

CI 116 MMN 2021

Deputy Director (Min. Admn)
Dept. of Mines & Geology
Bangalore-560001